# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 407* |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ |
| ಉತ್ತರಿಸುವ ದಿನಾಂಕ | 13.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪ್ರದೇಶದಲ್ಲಿ ಇರುವ ಚಿಕ್ಕ ಚಿಕ್ಕ ಪೂಜಾಸ್ಥಳಗಳಿಗೆ ಗುಡಿ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ;</td><td>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಗಿರಿಜನ/ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿನ ದೇವಾಲಯ, ಪ್ರಾರ್ಥನಾ ಮಂದಿರಗಳ ನವ ನಿರ್ಮಾಣ/ಜೀರ್ಣೋದ್ಧಾರಕ್ಕಾಗಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 189 ಮುಅಬಿ 2011, ದಿನಾಂಕ:19.09.2011ರಲ್ಲಿನ ಮಾರ್ಗಸೂಚಿಗಳನ್ವಯ ಬಿಡುಗಡೆ ಮಾಡಲಾಗುತ್ತಿದೆ. ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪರಂಪರೆ, ಸಂಸ್ಕೃತಿ, ಆಚಾರ, ವಿಚಾರ ಮತ್ತು ಧಾರ್ಮಿಕತೆ ಉಳಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು;</td><td>ಧಾರ್ಮಿಕ ದತ್ತಿ ಇಲಾಖೆಯಿಂದ ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪರಂಪರೆ, ಸಂಸ್ಕೃತಿ, ಆಚಾರ, ವಿಚಾರ ಮತ್ತು ಧಾರ್ಮಿಕತೆ ಉಳಿಸಲು ದಿನಾಂಕ:19.09.2011ರ ಸರ್ಕಾರದ ಆದೇಶದನ್ವಯ ಗಿರಿಜನ ಉಪಯೋಜನೆಯಡಿ ಒದಗಿಸಲಾಗುವ ಅನುದಾನವನ್ನು ಗಿರಿಜನ / ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಅಥವಾ ಸದರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಸಮೀಪದಲ್ಲಿ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ/ಸಮುದಾಯ ಭವನವನ್ನು ನಿರ್ಮಿಸಲು ಅಥವಾ ಅವುಗಳ ಜೀರ್ಣೋದ್ಧಾರಕ್ಕಾಗಿ ಬಳಸಲು ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.</td></tr>
<tr><td>ಇ)</td><td>ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಮತ್ತು ವನವಾಸಿ ಹಳ್ಳಿಗಳ ಎಷ್ಟು ದೇವಸ್ಥಾನಗಳಿಗೆ ಕಳೆದ ಎರಡು ವರ್ಷದಲ್ಲಿ ಅನುದಾನ ನೀಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಉತ್ತರ ಕನ್ನಡ ಜಿಲ್ಲೆಗೆ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಕಳೆದ ಎರಡು ವರ್ಷದಲ್ಲಿ ಒಟ್ಟು ರೂ.28.63 ಲಕ್ಷಗಳ ಅನುದಾನ ನೀಡಲಾಗಿದ್ದು, ವರ್ಷವಾರು ವಿವರ ಕೆಳಕಂಡಂತಿದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ಯೋಜನೆ</th><th>2023-24</th><th>2024-25</th><th>ಒಟ್ಟು</th></tr>
<tr><td>ಗಿರಿಜನ ಉಪ ಯೋಜನೆ</td><td>3.21</td><td>3.21</td><td>6.42</td></tr>
<tr><td>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ</td><td>19.08</td><td>3.13</td><td>22.21</td></tr>
<tr><td>ಒಟ್ಟು</td><td>22.29</td><td>6.34</td><td>28.63</td></tr>
</table>
</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಮೇಲ್ಕಂಡಂತೆ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಿ, ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಡಿ ಸದರಿ ಯೋಜನೆಯ ಮಾರ್ಗಸೂಚಿಯನ್ವಯ ಜಿಲ್ಲಾ ಹಂತದಲ್ಲಿರುವ ಜಿಲ್ಲಾ ಸಮಿತಿಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿ, ನಿರ್ವಹಿಸಬೇಕಾಗಿದ್ದು, ಅದರನ್ವಯ ವಿಧಾನಸಭಾ ಕ್ಷೇತ್ರವಾರು ಅನುದಾನದ ಮಾಹಿತಿ ಮತ್ತು ಕೈಗೊಳ್ಳಲಾದ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರ ಕಾಮಗಾರಿ ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ. |

ಸಂಖ್ಯೆ: ಕಂಇ 148 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ.- ಧಾರ್ಮಿಕ ದತ್ತಿ ಇಲಾಖೆಯ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯ ಕಾರ್ಯಯೋಜನೆ ಜಾರಿಗೊಳಿಸುವ ಕುರಿತು ಮಾರ್ಗಸೂಚಿ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಕಂಇ 32 ಮುಇವಿ 2011 ದಿನಾಂಕ:04-07-2011

2) ಸರ್ಕಾರದ ಆದೇಶ ಸಂಖ್ಯೆ: ಕಂಇ 32 ಮುಇವಿ 2011 ದಿನಾಂಕ:04-07-2011

3) ಆಯುಕ್ತರು, ಧಾರ್ಮಿಕ ದತ್ತಿ ಆಯುಕ್ತರ ಪತ್ರ ಸಂಖ್ಯೆ:ಆರಾಧನಾ/ಸಿಆರ್/26/2010-11 ದಿ:19-07-2011.

*******

ಪ್ರಸ್ತಾವನೆ:-

ಸರ್ಕಾರವು, 2011-11ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಲ್ಲಿ "ವಿಶೇಷ ಘಟಕ ಯೋಜನೆ" ಹಾಗೂ "ಗಿರಿಜನ ಉಪಯೋಜನೆ"ಗಳನ್ನು ಜಾರಿಗೊಳಿಸಿದೆ. ಇಲಾಖೆಗೆ ಇದೊಂದು ಹೊಸ ಯೋಜನೆಯಾಗಿದೆ.

ಈ ಯೋಜನೆಗಳ ಅನುಷ್ಠಾನಕ್ಕಾಗಿ ಇಲಾಖೆಗೆ ಲೆಕ್ಕಶೀರ್ಷಿಕೆ "2250-00-800-2-16-ವಿಶೇಷ ಘಟಕ ಯೋಜನೆ-422-(ಯೋಜನೆ)" ಅಡಿಯಲ್ಲಿ ರೂ.838.40 ಲಕ್ಷಗಳನ್ನು ಹಾಗೂ "2250-00-800-2-16-ಗಿರಿಜನ ಉಪಯೋಜನೆ-423(ಯೋಜನೆ)" ಅಡಿಯಲ್ಲಿ ರೂ.324.40 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ಹೀಗೆ ಒದಗಿಸಲಾದ ಅನುದಾನದಲ್ಲಿ, ಪ್ರಸ್ತಾಪಿತ ಯೋಜನೆಗಳನ್ನು ಜಾರಿಗೊಳಿಸಲು ಅನುವಾಗುವಂತೆ ಮೇಲೆ ಓದಲಾದ(1) ಮತ್ತು (2)ರ ಸರ್ಕಾರಿ ಆದೇಶಗಳಲ್ಲಿ ಕ್ರಮವಾಗಿ ರೂ.279.00 ಲಕ್ಷಗಳನ್ನು (SCSP) ಹಾಗೂ ರೂ.108.20 ಲಕ್ಷಗಳನ್ನು (TSP) ಧಾರ್ಮಿಕ ದತ್ತಿ ಆಯುಕ್ತರವರಿಗೆ ಮಂಜೂರು ಮಾಡಿದೆ. ಅಲ್ಲದೆ, ಮಂಜೂರು ಮಾಡಲಾದ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸಹ ಧಾರ್ಮಿಕ ದತ್ತಿ ಆಯುಕ್ತರವರಿಗೆ ಆದೇಶವನ್ನು ನೀಡಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಧಾರ್ಮಿಕ ದತ್ತಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆಯ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕಾರ್ಯಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ ಕರಡು ಮಾರ್ಗಸೂಚಿಯನ್ನು ತಯಾರಿಸಿ, ಸದರಿ ಮಾರ್ಗಸೂಚಿಗೆ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಧಾರ್ಮಿಕ ದತ್ತಿ ಆಯುಕ್ತರವರ ಕೋರಿಕೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಕಂಇ 189 ಮುಇಅ 2011, ಬೆಂಗಳೂರು ದಿನಾಂಕ:19-09-2011</u>

2011-12ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯ "ವಿಶೇಷ ಘಟಕ ಯೋಜನೆ" ಹಾಗೂ "ಗಿರಿಜನ ಉಪಯೋಜನೆ"ಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಆದೇಶದ ಅನುಬಂಧದಲ್ಲಿರುವ ಮಾರ್ಗಸೂಚಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಉಮಾವತಿ) 19/9
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ ಪ್ರಕಟಣೆಯ 25 ಪ್ರತಿಗಳನ್ನು ಸರ್ಕಾರಕ್ಕೆ ನೀಡಲು ಕೋರಿದೆ.

ಪ್ರತಿ:

1) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4) ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾಂ / ಗುಲ್ಬರ್ಗಾ ವಿಭಾಗಗಳು.
5) ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
6) ಎಲ್ಲಾ ಜಿಲ್ಲಾಧಿಕಾರಿಗಳು.
7) ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8) ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
9) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ ಕಂಇ 189 ಮುಅಅ 2011 ದಿನಾಂಕ: 19-09-2011ರ

## ಅನುಬಂಧ

ಧಾರ್ಮಿಕ ದತ್ತಿ ಇಲಾಖೆಯಡಿ ಜಾರಿಗೆ ತರಲು ಉದ್ದೇಶಿಸಲಾದ ವಿಶೇಷ ಘಟಕ ಯೋಜನೆ (ಪರಿಶಿಷ್ಟ ಜಾತಿ) ಮತ್ತು ಗಿರಿಜನ (ಪರಿಶಿಷ್ಟ ಪಂಗಡ) ಉಪಯೋಜನೆಯಡಿ ಒದಗಿಸಲಾದ ಅನುದಾನವನ್ನು ಮಂಜೂರು ಮಾಡಲು ಪ್ರತಿಯೊಂದು ಜಿಲ್ಲೆಯಲ್ಲಿ ಅಧಿಕಾರಿಗಳನ್ನೊಳಗೊಂಡ ಒಂದು ಉಪಯೋಜನಾ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ :-

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಹಿಂದೂ ಧಾರ್ಮಿಕ ದರ್ಮಾದಾಯ ದತ್ತಿಗಳ ಸಹಾಯಕ ಆಯುಕ್ತರು ಅಥವಾ ಜಿಲ್ಲಾ ಕೇಂದ್ರ ಸ್ಥಾನದ ಉಪವಿಭಾಗದ ಸಹಾಯಕ ಆಯುಕ್ತರು | ಸದಸ್ಯರು |
| 3 | ಎಲ್ಲಾ ತಾಲ್ಲೂಕು ತಹಸೀಲ್ದಾರರು | ಸದಸ್ಯರು |
| 4 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 5 | ಜಿಲ್ಲಾ ಪಂಚಾಯತ್ ಕಾರ್ಯಪಾಲಕ ಅಭಿಯಂತರರು | ಸದಸ್ಯರು |
| 6 | ಜಿಲ್ಲಾಧಿಕಾರಿಗಳ ಕಛೇರಿಯ ಧಾರ್ಮಿಕ ದತ್ತಿ ತಹಸೀಲ್ದಾರರು / ಧಾರ್ಮಿಕ ದತ್ತಿ ಸಹಾಯಕರು | ಕಾರ್ಯದರ್ಶಿಗಳು |

2. ಸದರಿ ಎರಡು ಉಪಯೋಜನೆಗಳಡಿ ಸರ್ಕಾರವು ಒದಗಿಸಿದ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಗಿರಿಜನ / ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಅಥವಾ ಸದರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಸಮೀಪ ನಿವೇಶನಗಳನ್ನು ಗುರುತಿಸಿ, ಅಲ್ಲಿ ಅವರಿಗಾಗಿ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ / ಸಮುದಾಯ ಭವನವನ್ನು ನಿರ್ಮಿಸಲು ಅಥವಾ ಅವುಗಳ ಜೀರ್ಣೋದ್ಧಾರಕ್ಕಾಗಿ ಬಳಸುವುದು ಈ ಕಾಮಗಾರಿಗೆ ಬಿಡುಗಡೆ ಮಾಡಬಹುದಾದ ಅನುದಾನದ ಗರಿಷ್ಠ ಮಿತಿಯು ಕೆಳಕಂಡಂತಿದೆ :-

| | | |
|---|---|---|
| 1 | ನವ ದೇವಾಲಯ/ಪ್ರಾರ್ಥನಾ ಮಂದಿರದ ನಿರ್ಮಾಣ ಅಥವಾ ಜೀರ್ಣೋದ್ಧಾರ | ₹. 10.00 ಲಕ್ಷ |
| 2 | ಕಲ್ಯಾಣ ಮಂಟಪ/ಸಮುದಾಯ ಭವನದ ನಿರ್ಮಾಣ | ₹. 15.00 ಲಕ್ಷ |

3. ನವ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ / ಸಮುದಾಯ ಭವನ ನಿರ್ಮಾಣಕ್ಕಾಗಿ ಸ್ಥಳಾವಕಾಶವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಗಿರಿಜನರು ವಾಸಿಸುವ ಸ್ಥಳಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ, ಇದಕ್ಕೆ ಬೇಕಾಗುವ ಕನಿಷ್ಠ ನಿವೇಶನವನ್ನು ಕಂದಾಯ ಇಲಾಖಾಧಿಕಾರಿಗಳು ಪ್ರತ್ಯೇಕವಾಗಿ ಗುರುತಿಸಬೇಕು. ಸೂಕ್ತ ಜಾಗ / ನಿವೇಶನ ಲಭ್ಯವಿಲ್ಲದಿದ್ದಲ್ಲಿ ಸಮೀಪದಲ್ಲಿರುವ ಸರ್ಕಾರಿ ಜಮೀನನ್ನು ಗುರುತಿಸಿ, ದೇವಾಲಯ / ಪ್ರಾರ್ಥನಾ ಮಂದಿರ / ಕಲ್ಯಾಣ ಮಂಟಪದ ನಿರ್ಮಾಣಕ್ಕಾಗಿ ಮೀಸಲಿಡತಕ್ಕದ್ದು. ನಿವೇಶನದ ಖಾತೆಯನ್ನು ದೇವರ ಹೆಸರಲ್ಲಿ ಅಥವಾ ಸಮುದಾಯದ ಹೆಸರಲ್ಲಿ ಬದಲಾವಣೆ ಮಾಡಬೇಕು.

4  ಈ ಉಪಯೋಜನೆಯಡಿ ಅನುದಾನ ಬಿಡುಗಡೆ ಮಾಡುವ ಮತ್ತು ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ:- ಪ್ರತಿವರ್ಷ ಈ ಉಪಯೋಜನೆಯಡಿ ಸರ್ಕಾರವು ಒದಗಿಸುವ ಅನುದಾನವನ್ನು ಧಾರ್ಮಿಕ ದತ್ತಿ ಆಯುಕ್ತರು ನಗದೀಕರಿಸಿ, ಅವರ ಅಭಿರಕ್ಷೆಯಲ್ಲಿರಿಸಿಕೊಳ್ಳಬೇಕು.

ಪ್ರತಿಯೊಂದು ತಾಲ್ಲೂಕಿನ ತಹಸೀಲ್ದಾರರು ಅವರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ / ಗಿರಿಜನರು ವಾಸಿಸುವ ಸ್ಥಳಗಳನ್ನು ಗುರುತಿಸಿ, ಅವರ ವಾಸ ಸ್ಥಳಕ್ಕೆ ಸಮೀಪ ಲಭ್ಯವಿರುವ ಜಮೀನು / ನಿವೇಶನ ಅಥವಾ ಸರ್ಕಾರಿ ಜಮೀನನ್ನು ಗುರುತಿಸಿ, ಸದರಿ ಜಮೀನಿನಲ್ಲಿ / ನಿವೇಶನದಲ್ಲಿ ಮೇಲ್ಕಂಡ ಸಮುದಾಯದವರಿಗಾಗಿ ನಿರ್ಮಿಸಬಹುದಾದ ದೇವಾಲಯ / ಪ್ರಾರ್ಥನಾ ಮಂದಿರ / ಸಮುದಾಯ ಭವನ / ಕಲ್ಯಾಣ ಮಂಟಪದ ನಿರ್ಮಾಣಕ್ಕಾಗಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ನಕ್ಷೆಯೊಂದಿಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಭಿಯಂತರರಿಂದ ತಯಾರಿಸಿ ಪ್ರಸ್ತಾವವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು. ಈ ಕಾಮಗಾರಿಗಳ ಪ್ರಸ್ತಾವಗಳನ್ನು ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಧಾರ್ಮಿಕ ದತ್ತಿ ತಹಸೀಲ್ದಾರರು / ದತ್ತಿ ಸಹಾಯಕರು ಪರಿಶೀಲನೆ ಮಾಡಿ ತಾಲ್ಲೂಕುಗಳಿಂದ ಪ್ರಸ್ತಾವವನ್ನು ತರಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಪ್ರತಿ ತಿಂಗಳು ಉಪಯೋಜನಾ ಸಮಿತಿಯ ಸಭೆಯನ್ನು ನಡೆಸುವ ಹಾಗೂ ಎಲ್ಲಾ ತಾಲ್ಲೂಕುಗಳಿಂದ ಬಂದಿರುವ ಪ್ರಸ್ತಾವಗಳನ್ನು ಪರಿಶೀಲಿಸಿ ಸದರಿ ಸಭೆಯಲ್ಲಿರಿಸುವುದು ಇವರ ಜವಾಬ್ದಾರಿ ಆಗಿರುತ್ತದೆ. ಅವರು ತಹಸೀಲ್ದಾರರಿಂದ ಬಂದ ಎಲ್ಲಾ ಪ್ರಸ್ತಾವಗಳನ್ನು ಜಿಲ್ಲಾಧಿಕಾರಿಗಳ ಜಿಲ್ಲಾ ಉಪಯೋಜನಾ ಸಮಿತಿಯ ಸಭೆಯಲ್ಲಿ ಮಂಡಿಸಿ, ಸದರಿ ಸಭೆಯ ತೀರ್ಮಾನದಂತೆ ಪ್ರಸ್ತಾವಕ್ಕೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕ್ರೋಢೀಕೃತ ಪ್ರಸ್ತಾವವನ್ನು ಧಾರ್ಮಿಕ ದತ್ತಿ ಆಯುಕ್ತರಿಗೆ ಅನುದಾನವನ್ನು ಬಿಡುಗಡೆ ಮಾಡಲು ಸಲ್ಲಿಸುವುದು. ಈ ರೀತಿ ಎಲ್ಲಾ ಜಿಲ್ಲೆಗಳಿಂದ ಬರುವ ಪ್ರಸ್ತಾವಗಳನ್ನು ಪ್ರಥಮ ಆದ್ಯತೆ ಮೇರೆಗೆ ಪರಿಶೀಲಿಸಿ, ಧಾರ್ಮಿಕ ದತ್ತಿ ಆಯುಕ್ತರು ಅನುದಾನದ ಲಭ್ಯತೆಗೆ ಅನುಗುಣವಾಗಿ ಕಂಡಿಕೆ (2) ರಲ್ಲಿ ನಿಗದಿಪಡಿಸಿದ ಗರಿಷ್ಠ ಮಿತಿಯಂತೆ ಆಯಾಯ ಜಿಲ್ಲೆಯಿಂದ ಬಂದಿರುವ ಪ್ರಸ್ತಾವದಂತೆ ಕಾಮಗಾರಿಗಳಿಗೆ ಬೇಕಾಗುವ ಒಟ್ಟು ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬೇಡಿಕೆ ಹುಂಡಿ ಮೂಲಕ ಕಳುಹಿಸಿಕೊಡುವುದು.

5.  ಧಾರ್ಮಿಕ ದತ್ತಿ ಆಯುಕ್ತರಿಂದ ಬಂದಿರುವ ಅನುದಾನವನ್ನು ಆಯಾ ಜಿಲ್ಲಾಧಿಕಾರಿಗಳು ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶದೊಂದಿಗೆ ತಹಸೀಲ್ದಾರರಿಗೆ ಕಳುಹಿಸಿಕೊಡುವುದು. ಹೀಗೆ ಜಿಲ್ಲಾಧಿಕಾರಿಗಳಿಂದ ಬಂದಿರುವ ಅನುದಾನವನ್ನು ತಹಸೀಲ್ದಾರರು ಅವರ ಅಭಿರಕ್ಷೆಯಲ್ಲಿ ಇರಿಸಿಕೊಂಡು ಕಾಮಗಾರಿಯನ್ನು ಸ್ಥಳೀಯ ಸಮಿತಿ / ಸಂಸ್ಥೆಗಳ ಮೂಲಕ ಕೈಗೊಳ್ಳಬಹುದು. ಒಂದು ವೇಳೆ ಸ್ಥಳೀಯ ಸಮಿತಿಗಳು ಅಥವಾ ಸಂಸ್ಥೆಗಳು ಕಾಮಗಾರಿಗಳನ್ನು ಕೈಗೊಳ್ಳಲು ಮುಂದೆ ಬಾರದ ಸಂದರ್ಭದಲ್ಲಿ, ಕಾಮಗಾರಿಯನ್ನು ಜಿಲ್ಲಾಪಂಚಾಯತ್ ಅಥವಾ ತಾಲ್ಲೂಕು ಪಂಚಾಯತ್ ಇಂಜಿನಿಯರ್‌ಗಳ ಮೂಲಕ ಕೈಗೊಳ್ಳಬೇಕು. ಹೀಗೆ ಕೈಗೊಳ್ಳಲಾದ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿಕೊಂಡು ತಹಸೀಲ್ದಾರರು ತಾಲ್ಲೂಕು ಪಂಚಾಯತ್ / ಜಿಲ್ಲಾ ಪಂಚಾಯತ್ ಇಂಜಿನಿಯರುಗಳಿಂದ ಕಾಮಗಾರಿಯ ಬಿಲ್‌ನ್ನು ದೃಢೀಕರಿಸಿಕೊಂಡು, ಬಿಲ್ ಮೊತ್ತವನ್ನು ಬಿಡುಗಡೆ ಮಾಡಬೇಕು. ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಹಾಗೂ ಕಾಮಗಾರಿಯು ಮುಗಿದಿರುವ ಬಗ್ಗೆ ತಹಸೀಲ್ದಾರರು ಪ್ರಮಾಣೀಕರಿಸಿಕೊಂಡು ಕಾಮಗಾರಿಯ ಅಂತಿಮ ಬಿಲ್ಲನ್ನು ಪಾವತಿಸಿದ ನಂತರ ಅನುದಾನದ ಬಳಕೆ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅನುದಾನ

ಬಿಡುಗಡೆಯಾದ ಒಂದು ವರ್ಷದೊಳಗೆ ತಹಸೀಲ್ದಾರರು ಸಲ್ಲಿಸುವುದು. ಈ ರೀತಿ ತಹಸೀಲ್ದಾರರಿಂದ ಬಂದಿರುವ ಬಳಕೆ ಪತ್ರವನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ಮೇಲು ಸಹಿಯೊಂದಿಗೆ ಧಾರ್ಮಿಕ ದತ್ತಿ ಆಯುಕ್ತರಿಗೆ ಕಳುಹಿಸಿಕೊಡತಕ್ಕದ್ದು. ಧಾರ್ಮಿಕ ದತ್ತಿ ಆಯುಕ್ತರು ಈ ಬಳಕೆ ಪತ್ರವನ್ನು ತಮ್ಮ ಮೇಲುಸಹಿಯೊಂದಿಗೆ ಮಹಾಲೇಖಪಾಲರಿಗೆ ರವಾನಿಸುವುದು.

6. ಈ ಉಪಯೋಜನೆಯಡಿ ಅನುದಾನ ಮಂಜೂರು ಮಾಡುವಾಗ ಎಲ್ಲಾ ತಾಲ್ಲೂಕುಗಳಲ್ಲಿ ಕಂಡುಬರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಗಿರಿಜನರು ವಾಸಿಸುವ ಸ್ಥಳಗಳನ್ನು ಆದ್ಯತೆ ಮೇರೆಗೆ ಗುರುತಿಸಿ ಅನುದಾನವನ್ನು ಬಿಡುಗಡೆ ಮಾಡುವಾಗ ಸಮತೋಲನವನ್ನು ಕಾಪಾಡಿಕೊಳ್ಳಬೇಕು ಹಾಗೂ ಸದರಿ ಜನಾಂಗದವರು ವಾಸಿಸುವ ಎಲ್ಲಾ ಪ್ರದೇಶಕ್ಕೂ ಈ ಉಪಯೋಜನೆಯ ಸೌಲಭ್ಯವು ದೊರಕುವಂತೆ ನೋಡಿಕೊಳ್ಳಬೇಕು. ತಾಲ್ಲೂಕು ಮಟ್ಟದಲ್ಲಿ ಈ ಯೋಜನೆಯನ್ನು ತಯಾರಿಸುವಾಗ ಮತ್ತು ಕಾರ್ಯಗತಗೊಳಿಸುವಾಗ ತಾಲ್ಲೂಕುಗಳ ಹೋಬಳಿ ಉಪ ತಹಸೀಲ್ದಾರರನ್ನು ಭಾಗಿಗಳನ್ನಾಗಿ ಮಾಡಿ ಅವರ ಮೂಲಕ ಅಂದಾಜು ಪಟ್ಟಿಯನ್ನು ಪಡೆದು ಪ್ರಸ್ತಾವವನ್ನು ಸಲ್ಲಿಸುವುದು ಹಾಗೂ ಕಾಮಗಾರಿಯನ್ನು ಉಪತಹಸೀಲ್ದಾರರು ಮತ್ತು ತಾಲ್ಲೂಕು ಪಂಚಾಯತ್ ಅಭಿಯಂತರರ ಉಸ್ತುವಾರಿಯಲ್ಲಿ ಕೈಗೊಳ್ಳುವುದು.

7. ಈ ಉಪಯೋಜನೆಯ ಅನುಷ್ಠಾನಾಧಿಕಾರಿಯಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಇವರನ್ನು ಜಿಲ್ಲಾಧಿಕಾರಿಗಳು ನೋಡೆಲ್ ಅಧಿಕಾರಿಯನ್ನಾಗಿ ನೇಮಿಸುವುದು. ಇಲಾಖಾ ಸಹಾಯಕ ಆಯುಕ್ತರ ಹುದ್ದೆ ಇಲ್ಲದಿರುವ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರಸ್ಥಾನದ ಉಪ ವಿಭಾಗದ ಸಹಾಯಕ ಕಮೀಷನರ್ ಅವರನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಿಸುವುದು. ಈ ಯೋಜನೆಯ ಅನುಷ್ಠಾನದ ಪೂರ್ಣ ಜವಾಬ್ದಾರಿ ಇವರದ್ದಾಗಿರುತ್ತದೆ. ಹಾಗೂ ತಹಸೀಲ್ದಾರರಿಂದ ತರಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಹಾಗೂ ಮಂಜೂರಾದ ಕಾಮಗಾರಿಗಳು ಅನುಷ್ಠಾನಗೊಳಿಸುವಂತೆ ನೋಡಿಕೊಳ್ಳುವುದು ಇವರ ಜವಾಬ್ದಾರಿಯಾಗಿರುತ್ತದೆ.

8. ಈ ಯೋಜನೆಯಡಿ ಬಿಡುಗಡೆಯಾದ ಅನುದಾನವು ಮೇಲ್ಕಂಡ ಉದ್ದೇಶಗಳಿಗೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಬಳಸುವಂತಿಲ್ಲ ಹಾಗೂ ಬೇರೆ ಉದ್ದೇಶಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಲ್ಲಿ ಹಣವನ್ನು ಬಿಡುಗಡೆ ಮಾಡಿದ ಅಧಿಕಾರಿಯನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಉದ್ದೇಶಕ್ಕೆ ಬಿಡುಗಡೆಯಾದ ಅನುದಾನವು ಬಿಡುಗಡೆಯಾದ ದಿನಾಂಕದಿಂದ ಒಂದು ವರ್ಷದೊಳಗೆ ಬಳಕೆಯಾಗಿ ಹಣ ಖರ್ಚಾಗುವಂತೆ ನೋಡಿಕೊಳ್ಳುವುದು ಜಿಲ್ಲಾ ಉಪಸಮಿತಿಯ ಹಾಗೂ ಸಂಬಂಧಿಸಿದ ತಹಸೀಲ್ದಾರರ ಜವಾಬ್ದಾರಿಯಾಗಿರುತ್ತದೆ.

(ಕೆ. ಉಮಾಪತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಅನುಬಂಧ-2

ಅನುಬಂಧ - 2

ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಮತ್ತು ವನವಾಸಿ ಹಳ್ಳಿಗಳಿಗೆ ಕಳೆದ ಎರಡು ವರ್ಷದಲ್ಲಿ ನೀಡಲಾದ ಅನುದಾನದ ವಿವರ:

(ರೂ.ಗಳಲ್ಲಿ)

| ಯೋಜನೆ | ವಿಧಾನ ಸಭಾ ಕ್ಷೇತ್ರ | ಸರ್ಕಾರದಿಂದ ಬಿಡುಗಡೆಯಾದ ಅನುದಾನ | | ಒಟ್ಟು ಹಂಚಿಕೆಯಾದ ಅನುದಾನ | ದೇವಸ್ಥಾನದ ಹೆಸರು ಮತ್ತು ವಿಳಾಸ | ಬಿಡುಗಡೆಯಾದ ಅನುದಾನ | ಷರಾ |
|---|---|---|---|---|---|---|---|
| | | 2023-24 | 2024-25 | | | | |
| ಗಿರಿಜನ ಉಪಯೋಜನೆ (TSP) | ಯಲ್ಲಾಪುರ-ಮುಂಡಗೋಡ | 3.71.717/- | 1.05.800/- | 4.77.517/- | ಶ್ರೀ ಕರೆಮ್ಮ ದೇವಿ ಹಾಗೂ ಶ್ರೀ ಮಾತಂಗಿ ದೇವಿ ಟ್ರಸ್ಟ ಸಾ: ಹುಲಿಕೊಂಡ ತಾ: ಮುಂಡಗೋಡ | 2.00.000/- | ಸದರಿ ದೇವಸ್ಥಾನಗಳ ಪ್ರಸ್ತಾವನೆಗಳಿಗೆ 2021-22 ರಿಂದ 2024-25 ನೇ ಸಾಲಿನ ಅನುದಾನಗಳನ್ನೊಳಗೊಂಡಂತೆ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿ ಪ್ರಾರಂಭಿಸಲು ಬಾಕಿ ಇರುತ್ತದೆ. |
| | | | | | ಶ್ರೀ ವಾಲ್ಮೀಕಿ ಆಂಜನೇಯ ಟ್ರಸ್ಟ (ರಿ) ಸಾ: ಹುಲಿಕೊಂಡ ತಾ: ಮುಂಡಗೋಡ | 2.77.517/- | |
| | ಕಾರವಾರ-ಅಂಕೋಲಾ | 3.71,717/- | 1.05.800/- | 4.77.517/- | - | - | ಸದರಿ ವಿಧಾನ ಸಭಾ ಕ್ಷೇತ್ರದ ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ. |
| | ಕುಮಟಾ-ಹೊನ್ನಾವರ | 3.71,717/- | 1.05.800/- | 4.77.517/- | - | - | |
| | ಹೊನ್ನಾವರ-ಭಟ್ಕಳ | 3.71,717/- | 1.05.800/- | 4.77.517/- | - | - | |
| | ಶಿರಸಿ-ಸಿದ್ದಾಪುರ | 3.71,717/- | 1.05.800/- | 4.77.517/- | - | - | |
| | ಹಳಿಯಾಳ-ಜೋಯಿಡಾ | 3.71.717/- | 1.05.800/- | 4.77.517/- | - | - | |
| ಒಟ್ಟು | | 22,30,302/- | 6.34.800/- | 28.65,102/- | - | 4.77.517/- | |

ಜಿಲ್ಲಾಧಿಕಾರಿ (ಉ.ಕ)

Scanned with OKEN Scanner